2

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಸಮಿತಿ - ಸಾರ್ವಜನಿಕ ಲೆಕ್ಕಪತ್ರ ಸಮಿತಿ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ ದಿನಾಂಕ : DATE : 7/4/21

# 19 ಅಧಿಕಾರಿಗಳ ಖುಲಾಸೆ ಒಪ್ಪದಿರಲು ಪಿಎಸಿ ನಿರ್ಧಾರ

## ಸರ್ಕಾರಕ್ಕೆ 83 ಲಕ್ಷ ನಷ್ಟ ಮಾಡಿದ ಪ್ರಕರಣ

• **ಕನ್ನಡಪ್ರಭ ವಾರ್ತೆ** ಬೆಂಗಳೂರು 7/4/21

ಸರ್ಕಾರಿ ಕೇಂದ್ರ ಮುದ್ರಣಾಲಯದಲ್ಲಿ ಅವಶ್ಯಕತೆಗೆ ಮೀರಿ ಎಲೆಕ್ಟಾನಿಕ್ ಸಾಧನಗಳನ್ನು ಖರೀದಿಸಿ ಸರ್ಕಾರಕ್ಕೆ 82.34 ಲಕ್ಷ ರು. ನಷ್ಟ ಮಾಡಿದ ಆರೋಪ ಸಂಬಂಧ 19 ಅಧಿಕಾರಿಗಳನ್ನು ಖುಲಾಸೆಗೊಳಿಸಿರುವ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಕ್ರಮವನ್ನು ಒಪ್ಪದಿರಲು ಸಾರ್ವಜನಿಕ ಲೆಕ್ಕಪತ್ರ ಸಮಿತಿ (ಪಿಎಸಿ) ತೀರ್ಮಾನಿಸಿದೆ.

ವಿಧಾನಸೌಧದಲ್ಲಿ ಮಂಗಳವಾರ ನಡೆದ ಲೆಕ್ಕಪತ್ರ ಸಮಿತಿ ಸಭೆಯಲ್ಲಿ, ಸಮಿತಿಯ ವ್ಯಾಪ್ತಿಯಲ್ಲಿರುವ ಈ ಪ್ರಕರಣದ ಬಗ್ಗೆ ಪ್ರಾಥಮಿಕ ತನಿಖಾ ವರದಿಯನ್ನೂ ಸಲ್ಲಿಸದೆ ಶಿಕ್ಷಣ ಇಲಾಖೆ ತನ್ನ ಮಟ್ಟದಲ್ಲೇ ಆರೋಪಿಗಳನ್ನು ಖುಲಾಸೆಗೊಳಿಸಿರುವ ಬಗ್ಗೆ ಸಮಿತಿಯಲ್ಲಿ ಗಂಭೀರ ಚರ್ಚೆ ನಡೆಯಿತು. ಸಮಿತಿ ಸದಸ್ಯರು ಇಲಾಖಾ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರಲ್ಲದೆ ಇಲಾಖಾ ಕ್ರಮವನ್ನು ಒಪ್ಪಲು ಸಾಧ್ಯವಿಲ್ಲ ಎಂದು ತಿಳಿಸಿದರು ಎಂದು ಮೂಲಗಳು ತಿಳಿಸಿವೆ.

**ಏನಿದು ಪ್ರಕರಣ?:** ಅವಶ್ಯಕತೆಯನ್ನು ನಿರ್ದಿಷ್ಟವಾಗಿ ತಿಳಿಯದೆ, ಇ-ಆಡಳಿತದೊಂದಿಗೆ ಸಮಾಲೋಚನೆಯನ್ನೂ ನಡೆಸದೆ ಕಂಪ್ಯೂಟರ್, ಪ್ರಿಂಟರ್, ಕಾಟ್ರಿಜ್ ಟೋನರ್ ಸೇರಿದಂತೆ ಎಲೆಕ್ಟಾನಿಕ್ ವಸ್ತುಗಳನ್ನು ಖರೀದಿಸಿ ಬಳಕೆ ಮಾಡದೆ ದಾಸ್ತಾನಿಟ್ಟಿದ್ದರಿಂದ 82.34 ಲಕ್ಷ ರು. ಸರ್ಕಾರದ ಹಣ ನಿಷ್ಫಲವಾಗಿರುವದನ್ನು 2016ರಲ್ಲಿ ಸಿಎಜಿ ಹೊರಗೆಡವಿತ್ತು. ಈ ನಷ್ಟಕ್ಕೆ ಐಎಎಸ್ ಅಧಿಕಾರಿ ರವಿಶಂಕರ್ (ಈಗ ನಿವೃತ್ತಿ), ಸಹಾಯಕ ನಿರ್ದೇಶಕ ಬಿ.ಎನ್.ಟಿ. ಗೌಟ ಸೇರಿ 20 ಅಧಿಕಾರಿ, ನೌಕರರು ಕಾರಣವೆಂಬ ಆರೋಪ ಕೇಳಿಬಂದಿತ್ತು.

ಬಳಿಕ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಈ ಪ್ರಕರಣವನ್ನು ವಿಚಾರಣೆಗೆ ಕೈಗೆತ್ತಿಕೊಂಡಿತ್ತು.